## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ: 3639/2017 ರಲ್ಲಿ ನೀಡಿರುವ ಆದೇಶದಂತೆ ಶ್ರೀಮತಿ ಸಾಕಮ್ಮ ದಿವಂಗತ ಮಾದಯ್ಯ, ಇವರಿಗೆ ಕುಟುಂಬ ಪಿಂಚಣಿ ಮಂಜೂರು ಮಾಡುವ ಬಗ್ಗೆ – ಆದೇಶ.

**ಓದಲಾಗಿದೆ:-** ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಅರ್ಜಿ ಸಂಖ್ಯೆ: 3639/2017 ರಲ್ಲಿ ನೀಡಿರುವ ಆದೇಶ ದಿನಾಂಕ: 09.08.2017.

****

**ಪ್ರಸ್ತಾವನೆ:**

ಶ್ರೀಮತಿ ಸಾಕಮ್ಮ ದಿವಂಗತ ಮಾದಯ್ಯ, ಗ್ಯಾಂಗ್‌ಮನ್, ಪಂ.ರಾ.ಇಂ. ಉಪವಿಭಾಗ, ಮದ್ದೂರು ರವರು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಸಲ್ಲಿಸಿದ ಅರ್ಜಿ ಸಂಖ್ಯೆ: 3639/2017 ರಲ್ಲಿ ಕೋರಿಕೆ ಬಗ್ಗೆ ಮಾನ್ಯ ನ್ಯಾಯಮಂಡಳಿಯು ದಿನಾಂಕ ದಿನಾಂಕ: 09.08.2017 ರಂದು ಆದೇಶ ನೀಡಿ ಮೊದಲನೇ ಪ್ರತಿವಾದಿಯಾದ ಸರ್ಕಾರದ ಕಾರ್ಯದರ್ಶಿ ಇವರು ಪ್ರಕರಣದ ಸತ್ಯಾಸತ್ಯತೆಗಳ ಕುರಿತು ವಿಚಾರಣೆ ನಡೆಸಿ ಅರ್ಜಿದಾರರಾದ ಶ್ರೀಮತಿ ಸಾಕಮ್ಮ ಇವರು ದಿವಂಗತ ಮಾದಯ್ಯನವರ ಕಾನೂನು ರೀತ್ಯಾ ವಿವಾಹವಾದ ಪತ್ನಿಯೇ ಎಂಬ ಬಗ್ಗೆ ನಿರ್ಣಯಿಸಿ ಸಧರಿಯವರಿಗೆ ಕುಟುಂಬ ಪಿಂಚಣಿ ಮಂಜೂರು ಮಾಡುವ ಕುರಿತು ನಿಯಮಾನುಸಾರ ಆದೇಶ ಹೊರಡಿಸಲು ನಿರ್ದೇಶನ ನೀಡಿರುತ್ತದೆ.

ಅದರಂತೆ ಸರ್ಕಾರದ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ದಿ:29.09.2018 ರಂದು ವಿಚಾರಣೆ ನಡೆಸಿರುತ್ತಾರೆ. ಆ ಸಂದರ್ಭದಲ್ಲಿ ಶ್ರೀಮತಿ ಸಾಕಮ್ಮ ಇವರು ಸಹ ಹಾಜರಾಗಿ ದಿವಂಗತ ಮಾದಯ್ಯ, ಗ್ಯಾಂಗ್‌ಮನ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉ ಪವಿಭಾಗ, ಮದ್ದೂರು ಇವರನ್ನು ದಿ:10.12.1999 ರಂದು ವಿವಾಹ ವಾಗಿರುವ ಬಗ್ಗೆ (1) ವಿವಾಹ ಆಮಂತ್ರಣ ಪತ್ರಿಕೆಯ ಮೂಲ ಪ್ರತಿ, (2) ವಿವಾಹದ ಛಾಯಚಿತ್ರಗಳ ಆಲ್ಬಂ ಹಾಗೂ (3) ದಿವಂಗತ ಮಾದಯ್ಯ ಇವರ ಮೊದಲನೇ ಪತ್ನಿಯ ಮಕ್ಕಳು ನೀಡಿರುವ ನಿರಾಕ್ಷೇಪಣಾ ಪತ್ರಗಳು, (4) ಶ್ರೀಮತಿ ಕೆಂಪಮ್ಮ ಇವರು ಮರಣ ಹೊಂದಿರುವ ಬಗ್ಗೆ ಮೂಲ ಮರಣ ಪ್ರಮಾಣ ಪತ್ರ, (5) ಬ್ಯಾಂಕ್ ಪಾಸ್ ಪುಸ್ತಕ ಮತ್ತು (6) ತಹಶೀಲ್ದಾರರವರಿಂದ ಪಡೆದಿರುವ ದಿವಂಗತ ಮಾದಯ್ಯರವರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರ (ಜೆರಾಕ್ಸ್ ಪ್ರತಿ)ಗಳನ್ನು ಒದಗಿಸಿರುತ್ತಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿದೆ. ದಿವಂಗತ ಮಾದಯ್ಯ, ಗ್ಯಾಂಗ್‌ಮನ್, ಪಂ.ರಾ.ಇಂ. ಉಪವಿಭಾಗ, ಮದ್ದೂರು ಇವರ ಮೊದಲನೇ ಪತ್ನಿ ಶ್ರೀಮತಿ ಕೆಂಪಮ್ಮ ಇವರು ಸಹ ದಿ:15.05.1998 ರಂದು ಮರಣಹೊಂದಿರುತ್ತಾರೆ. ತದನಂತರ ದಿವಂಗತ ಮಾದಯ್ಯ ಹಾಗೂ ಶ್ರೀಮತಿ ಸಾಕಮ್ಮ ಇವರ ವಿವಾಹ ನಡೆದಿರುವುದು ಲಭ್ಯಪಡಿಸಿರುವ ದಾಖಲೆಗಳಿಂದ ಕಂಡು ಬರುತ್ತದೆ. ಅಲ್ಲದೆ ದಿವಂಗತ ಮಾದಯ್ಯನವರ ಮೊದಲನೇ ಪತ್ನಿಯ ಮಕ್ಕಳು ಸಹ ಶ್ರೀಮತಿ ಸಾಕಮ್ಮ ಇವರಿಗೆ ಕುಟುಂಬ ಪಿಂಚಣಿ ಮಂಜೂರು ಮಾಡಲು ನಿರಾಕ್ಷೇಪಣಾ ಪತ್ರವನ್ನು ನೀಡಿರುತ್ತಾರೆ.

ಈ ಎಲ್ಲಾ ಕಾರಣಗಳಿಂದಾಗಿ ಶ್ರೀಮತಿ ಸಾಕಮ್ಮ ಇವರು ದಿವಂಗತ ಮಾದಯ್ಯ, ಗ್ಯಾಂಗ್‌ಮನ್‌ರವರ ಕಾನೂನುಬದ್ಧ 2ನೇ ಪತ್ನಿ ಎಂಬುದನ್ನು ನಿರ್ಣಯಿಸಲಾಗಿದೆ. ಅದರಂತೆ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 80 ಜಿಪಅ 2018, ಬೆಂಗಳೂರು ದಿನಾಂಕ: 27.12.2018</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀಮತಿ ಸಾಕಮ್ಮ ಇವರು ದಿವಂಗತ ಮಾದಯ್ಯ, ಗ್ಯಾಂಗಮನ್, ಪಂ.ರಾ.ಇಂ. ಉಪವಿಭಾಗ, ಮದ್ದೂರು ಇವರ ಕಾನೂನುಬದ್ಧ 2ನೇ ಪತ್ನಿಯಾಗಿರುವುದರಿಂದ, ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ಅನುಸಾರ ಲಭ್ಯವಾಗಬಹುದಾದ ಕುಟುಂಬ ಪಿಂಚಣಿ ಸೌಲಭ್ಯವನ್ನು ಮಂಜೂರು ಮಾಡಿದೆ.

ಈ ದಿಸೆಯಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಮುಖ್ಯ ಕಾರ್ಯನಿವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮಂಡ್ಯ ಮತ್ತು ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಮಂಡ್ಯ ಇವರುಗಳಿಗೆ ಸೂಚಿಸಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

27/12/2018

**(ಎಸ್.ರಂಗನಗೌಡ)**
**ಸರ್ಕಾರದ ಅಧೀನ ಕಾರ್ಯದರ್ಶಿ (ಸೇ-ಎ)**
**ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.**

27/12

**<u>ಇವರಿಗೆ,</u>**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕ ಪತ್ರ 1 & 2) / (ಆಡಿಟ್)
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮಂಡ್ಯ.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ಸರ್ಕಲ್, ಬೆಂಗಳೂರು.
5. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಉಪ ಕಾರ್ಯದರ್ಶಿ (ಆಡಳಿತ) ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
6. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.
7. ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.